

# ವಿಮಾನದೊಳಗೆ ರೆಸ್ಟೋರೆಂಟ್!

ನಿಮ್ಮ ಕಂಗಳು ನಿಂತಿರುವ ಆ ವಿಮಾನವನ್ನು ವೀಕ್ಷಿಸುವ ಮೊದಲೇ ಸುಮಧುರ ಸಂಗೀತದಲೆಗಳು ಕಿವಿಗಳನ್ನು ಹಿತವಾಗಿ ಸ್ಪರ್ಶಿಸಿ ನಿಮ್ಮನ್ನು ಆಶ್ಚರ್ಯಚಕಿತರನ್ನಾಗಿಸುತ್ತವೆ. ಹತ್ತಿರ ಹೋಗಿ ಗಮನಿಸಿದರೆ ಸೀಟುಗಳೆಲ್ಲಾ ಆಗಲೇ ಭರ್ತಿಯಾಗಿವೆ... ಹಾಗಂತ ನೀವು ನಿರಾಶರಾಗಬೇಕಿಲ್ಲ. ನಿಮಗಾಗಿಯೇ ವಿಮಾನದ ಹೊಟ್ಟೆಯ ಕೆಳಗೆ ವೇದಿಕೆಯೊಂದನ್ನು ಸಿದ್ಧಪಡಿಸಲಾಗಿದೆ. ನಿಮ್ಮಂತೆ ಕಾಯುತ್ತಿರುವ ಒಂದು ಡಜನ್ ಮಂದಿ ಪಂಜಾಬಿ ಗಾಯನಗಳಿಗೆ ತಕ್ಕಂತೆ ಹೆಜ್ಜೆ ಹಾಕುತ್ತಿದ್ದು ಮೇಲೆ ಸೀಟು ಖಾಲಿಯಾಗುತ್ತಿದಂತೆ ಮೇಲೇರಿ ಗಬಕ್ಕನೆ ಸೀಟು ಹಿಡಿಯುತ್ತಾರೆ!

ಈ ವಿಮಾನಕ್ಕೇಕೆ ಇಷ್ಟೊಂದು ರಷ್ ಎಂದುಕೊಂಡಿರಾ? ಕಾರಣವಿಷ್ಟೆ, ಅಲ್ಲಿ ನಿಮಗಾಗಿ ರಮ್ ನಲ್ಲಿ ಅದ್ದಿ ತಯಾರಿಸಲ್ಪಟ್ಟಿರುವ ಶರಾಬಿ ಬಟರ್ ಚಿಕನ್ ಮತ್ತು ಟರ್ಬುಲೆಂಟ್ ಕುಕ್ಕಡ್ ಎಂಬ ಎರಡು ವಿಧದ ಮದಿರಾ ಭೋಜನವನ್ನು ಉಣಬಡಿಸಲಾಗುತ್ತದೆ!

ಇದುವೇ 'ರನ್ ವೇ 1 ನಾಮಾಂಕಿತ ವೈಮಾನಿಕ ರೆಸ್ಟೋರೆಂಟ್! ಬಳಕೆಯಲ್ಲಿಲ್ಲದ ಏರ್ ಬಸ್ ಎ 320 ವಿಮಾನವೊಂದನ್ನು ಇಲ್ಲಿ ರೆಸ್ಟೋರೆಂಟ್ ಆಗಿ ಪರಿವರ್ತಿಸಲಾಗಿದೆ! ಹರಿಯಾಣದ ಅಂಬಾಲದಲ್ಲಿ ಅಂಬಾಲ ಕುರುಕ್ಷೇತ್ರ ರಾಷ್ಟ್ರೀಯ ಹೆದ್ದಾರಿ 1ರ ಪಕ್ಕದಲ್ಲಿ ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ ಇದು ಅಸ್ತಿತ್ವದಲ್ಲಿದೆ.

ಜೆಟ್ ಏರ್‌ವೇಸ್ ನ ಮಾಜಿ ಉದ್ಯೋಗಿಯಾಗಿರುವ ಶ್ರುತಿ ಕಕ್ಕಡ್ ಎಂಬ ಮಹಿಳೆ ತಮ್ಮ ಪತಿಯ ಜೊತೆಗೂಡಿ ಆರಂಭಿಸಿರುವ ಈ ರೆಸ್ಟೋರೆಂಟ್ ನಲ್ಲಿ ಸೀಟು ಹಿಡಿಯಲು ವಾರದ ಕೊನೆಯಲ್ಲಿ 2 ಗಂಟೆಗಳಷ್ಟು ಕಾಯಬೇಕಾಗುತ್ತದೆ. ಕಾಯುವಿಕೆಯ ಸಲುವಾಗಿಯೇ ಸಂಗೀತ ಮತ್ತು ನೃತ್ಯವನ್ನು ನಿತ್ಯ ಆಯೋಜನೆ ಮಾಡಲಾಗಿದೆ. ಏರ್ ಇಂಡಿಯಾಗೆ ಸೇರಿದ ಈ ವಿಮಾನವನ್ನು ದೆಹಲಿಯಿಂದ ಖರೀದಿಸಿ ರೆಕ್ಕೆಗಳನ್ನು ಕಳಚಿ ರಾತ್ರಿ ವೇಳೆ ಬೃಹತ್ ಟ್ರೈಲರ್ ಮುಖಾಂತರ ಸಾಗಿಸಿ ತರಲಾಗಿದೆ. ಅಂಬಾಲ ತಲುಪಲು ಆರು ದಿನಗಳು ತಗುಲಿದ್ದು ರಸ್ತೆಯುದ್ದಕ್ಕೂ ಜನರನ್ನಾಕರ್ಷಿಸಿತ್ತು!



ಸ್ಥಳ ತಲುಪಿದ ನಂತರ ಅದನ್ನು ರೆಸ್ಟೋರೆಂಟ್ ಆಗಿ ಪರಿವರ್ತಿಸಲು ಹತ್ತು ತಿಂಗಳ ಕಾಲಾವಧಿ ತಗುಲಿತ್ತು. ವಿಮಾನದೊಳಗಿನ ಸ್ಥಳಾವಕಾಶವನ್ನು ತಕ್ಕಂತೆ ಮಾರ್ಪಡಿಸಿ 80 ಆಸನಗಳ ಸುವ್ಯವಸ್ಥೆ ಮಾಡಲಾಗಿದ್ದು ಬರ್ತ್‌ಡೇ ಇತ್ಯಾದಿ ಪಾರ್ಟಿಗಳಿಗೂ ಸೂಕ್ತವಾಗಿದೆ. ಕಾಕ್ ಪಿಟ್ ನಲ್ಲಿ ಮಕ್ಕಳಿಗಾಗಿ 3ಡಿ ಆಟದ ಸೌಲಭ್ಯವನ್ನೂ ಕಲ್ಪಿಸಲಾಗಿದೆ. 55 ನೌಕರರನ್ನು ಹೊಂದಿದ್ದು ಅವರೆಲ್ಲರೂ ವಿಮಾನ ಸಿಬ್ಬಂದಿಗಳ ಸಮವಸ್ತ್ರದಲ್ಲೇ ಕಂಗೊಳಿಸುತ್ತಾರೆ.

ಒಳಪ್ರವೇಶಿಸುವ ಮೊದಲು ಏಣಿಯ ಕೆಳಗಿರುವ ರಿಸೆಪ್ಷನ್ ನಲ್ಲಿ 200 ರೂಪಾಯಿ ತೆತ್ತು ಬೋರ್ಡಿಂಗ್ ಪಾಸ್ ಪಡೆಯ ತಕ್ಕದ್ದು! ಮಕ್ಕಳಿಗಾದರೆ 100 ರೂಪಾಯಿ. ಇದನ್ನು ನಂತರ ಊಟದ ಬಿಲ್ಲಿನಲ್ಲಿ ಹೊಂದಿಸಲಾಗುತ್ತದೆ.

ಭಾರತೀಯ, ಚೈನೀಸ್ ಮತ್ತು ಇಟಾಲಿಯನ್ ಆಹಾರ ಪದಾರ್ಥಗಳನ್ನೊಳಗೊಂಡ ಸುಮಾರು 300 ವಿಧದ ಖಾದ್ಯಗಳು ಲಭ್ಯವಿದ್ದು ಶರಾಬಿ ಬಟರ್ ಚಿಕನ್ ರನ್ ವೇ 1 ರ ವಿಶೇಷ ಆಕರ್ಷಣೆ. ಇದರ ರುಚಿ ಸವಿಯಲಿಕ್ಕಾಗಿಯೇ ದೂರದ ದೆಹಲಿಯಿಂದಲೂ ಖಾದ್ಯ ಪ್ರಿಯರು ಇಲ್ಲಿಗೆ ಬರುತ್ತಾರೆ. ನೀವೂ ಈ ಹೆದ್ದಾರಿಯಲ್ಲಿ ಎಂದಾದರೂ ಸಂಚರಿಸುವುದಿದ್ದರೆ ರನ್ ವೇ1 ವೈಮಾನಿಕ ರೆಸ್ಟೋರೆಂಟ್‌ಗೊಮ್ಮೆ ಭೇಟಿ ನೀಡಿ ಅನನ್ಯ ರುಚಿ ಮತ್ತ ಅನುಭವ ಪಡೆಯಿರಿ.

■ ರಮಣ್ ಶೆಟ್ಟಿ ರೆಂಜಾಳ್